SRI M. S. KRISHANAN.—It is absolutely a false statement. It is a tissue of lies by the police.

SRI D. DEVARAJ URS.—How could it be false when the house of one worker who is an employee of the factory-he is not a Kannadiga and he comes from other regions from northern part of the country-is damaged in Nagavara village ?

SRI M. S. KRISHNAN.—Even about that you find out the truth.

SRI D. DEVARAJ URS—.That is why cases have been filed. There are cases where investigation is going on. Even before bringing this motion the hon. member did tell me that that person has not been properly treated and police beat him. I have told the police that if it were so, it is not correct, and they will have to undergo disciplinary action. Now he asserts that they have beaten the workers. I will look into the matter. I may state one thing and that is that no police officer has a right to beat any worker, or leader or Trade Union leaders, to whichever party he belongs to. Therefore, I personally feel-I can straightaway state as Government policy—that police officers should not indulge in beating the Trade Union Leaders or any leaders or workers. I must therefore look into what the hon. member alleges.

SRI M. S. KRISHNAN.—Will you give permission for prosecution ?

SRI D. DEVARAJ URS.—If there is any such representation I shall certainly consider it.

ಶ್ರೀ ಹೆಚ್. ಟಿ. ಕೃಷ್ಣಪ್ಪ .. ನಾನು ಇಲ್ಲಿ ಸರ್ಕಾರದ ಗಮನವನ್ನು ನಮ್ಮ ತಾಲ್ಲೂಕಿನ ಅರಸಾಪುರ ಕೆರೆ ಬಗ್ಗೆ ಸೆಳೆಯಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ಕೃಷ್ಣಪ್ಪನವರು ನೋಟೀಸು ಕಳುಹಿಸಿಲ್ಲ. ದಯವಿಟ್ಟು ಹೀಗೆ ವಿಷಯ ಎತ್ತಿದರೆ ಸರ್ಕಾರ ಹೇಗೆ ಇವಕ್ಕೆ ಉತ್ತರ ಕೊಡಬಹುದು. ದಯವಿಟ್ಟು ಇದರ ಬಗ್ಗೆ ಏನು ವಿವರ ಗಳಿವೆಯೋ ಅದನ್ನು ನನಗೆ ಬಂದು ತಿಳಿಸಬೇಕು. ತಿಳಿಸಿದರೆ ಆಗ ಅದನ್ನು ವಿಚಾರ ಮಾಡಬಹುದು. ದಯವಿಟ್ಟು ನನ್ನ ಚೆಂಬರಿಗೆ ಬರಬೇಕು. ಪೇಪರುಗಳಿದ್ದರೆ ಅದನ್ನು ತೆಗೆದುಕೊಂಡು.

Mismanagement at the Housing Board

ಶ್ರೀ ಕೊಣಂದೂರು ಲಿಂಗಪ್ಪ —ಮಾನ್ಯ ವಸತಿ ಶಾಖೆ ಮಂತ್ರಿಗಳು ಹೌಸಿಂಗ್ ಬೋರ್ಡಿನಲ್ಲಿ ಸುಮಾರು ನಾಲ್ಕೂವರೆ ಲಕ್ಷ ರೂಪಾಯಿಗಳ ದುರ್ವ್ಯವಹಾರ ನಡೆದಿರುವ ಬಗ್ಗೆ ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದ್ದಾರೆ. ಇದರ ಬಗ್ಗೆ ನಿನ್ನೆ ನಾಳೆ ಕೊಡುತ್ತೇನೆಂದು ಹೇಳಿದರೂ ಇದುವರೆಗೂ ಸ್ಟೇಟ್‌ಮೆಂಟು ಬರಲಿಲ್ಲ.

ಶ್ರೀ ಎಂ. ವೈ ಘೋರ್ಪಡೆ.– ನಾಳೆ ಇದರ ಬಗ್ಗೆ ಹೇಳಿಕೆ ಕೊಡುತ್ತೇನೆ.

Purchase of Wheat in U.P State

ಶ್ರೀ ಬಿ. ವಿ. ಕಕ್ಕಿಲಾಯ.—ರೂಲು ೩೧೨ರ ಪ್ರಕಾರ ಒಂದು ನೋಟೀಸ್ ಕೊಟ್ಟಿದ್ದೇನೆ. ನಮ್ಮ ಸರ್ಕಾರ ಯು.ಪಿ. ನಿಂದ ಗೋಧಿ ಕೊಂಡುಕೊಂಡ ಬಗ್ಗೆ ಅನೇಕ ದುರ್ವ್ಯವಹಾರಗಳು ಆಗಿವೆ ಎಂದು ಕಂಡು ಬಂದಿದೆ ಮತ್ತು ಆಗ ಆಹಾರ ಮಂತ್ರಿಗಳಾಗಿದ್ದ ಶ್ರೀ ಕೆ. ಹೆಚ್. ಪಾಟೀಲರವರು ಈ ವ್ಯವಹಾರದಲ್ಲಿದ್ದರು ಮತ್ತು ಅವರು ಈ ಗೋಧಿಯನ್ನು ತರಿಸಿದ್ದು.

ಅಧ್ಯಕ್ಷರು.—ಆಹಾರ ಮಂತ್ರಿಗಳು ಈಗ ಇಲ್ಲ. ನಾಳೆ ಇದರ ಬಗ್ಗೆ ಅಜೆಂಡಾದಲ್ಲಿ ಹಾಕುತ್ತೇನೆ.